

# ಪ್ರಕೃತಿಯ ತೂಗುಯ್ಯಾಲೆ ‘ಫೋ ಚು ಸೇತುವೆ’

**ಬೆಟ್ಟಗುಡ್ಡಗಳ ತಪ್ಪಲಲ್ಲಿ ಹೊಯ್ದಾಡುವ ‘ಫೋ ಚು ತೂಗುಸೇತುವೆ’ ಪ್ರಾಕೃತಿಕ ಸಿರಿಯ ನಡುವೆ ಎಂಜಿನಿಯರಿಂಗ್ ಕೌಶಲಕ್ಕೂ ಸಾಕ್ಷಿಯಾಗಿರುವ ಭೂತಾನ್‌ನ ಪ್ರಮುಖ ಆಕರ್ಷಣೆ.**

■ ಸಿಹಿಜೀವಿ ವೆಂಕಟೇಶ್ವರ

ತನ್ನ ಅದ್ಭುತ ಪ್ರಾಕೃತಿಕ ಸೌಂದರ್ಯದಿಂದ ಮನಸೆಳೆಯುವ ಭೂತಾನ್, ಶ್ರೀಮಂತ ಸಂಸ್ಕೃತಿಗೂ ಹೆಸರುವಾಸಿ. ಪ್ರವಾಸಿಗರನ್ನು ಸೆಳೆಯುವ ಅಮೋಘ ತಾಣಗಳನ್ನು ಹೊಂದಿರುವ ಇಲ್ಲಿ ನಿಸರ್ಗದ ಸಿರಿಯೊಂದಿಗೆ ಎಂಜಿನಿಯರಿಂಗ್ ಕೌಶಲಕ್ಕೂ ಸಾಕ್ಷಿಯಾಗಿರುವ ಸ್ಥಳವಿದೆ. ಅದೇ ಸಸ್ಪೆನ್ಷನ್ ಬ್ರಿಡ್ಜ್!

ಪುನಾಕಾ ಕೋಟೆ ನೋಡಿದ ಬಳಿಕ ನಾವು ಈ ತೂಗುಸೇತುವೆ ನೋಡಲು ಹೊರಟೆವು. ‘ಭೂತಾನಿನ ಅತಿ ಉದ್ದದ ತೂಗುಸೇತುವೆ’ ಎಂದು ಪರಿಗಣಿಸಲಾದ ಈ ಸೇತುವೆಯನ್ನು ‘ಫೋ ಚು ತೂಗುಸೇತುವೆ’ ಎಂದೂ ಕರೆಯುತ್ತಾರೆ.

ಸರಿಸುಮಾರು 160 ಮೀಟರ್ ಉದ್ದವಿರುವ ಈ ಸೇತುವೆ ಧುಮ್ಮಿಕ್ಕುವ ಫೋ ಚು ನದಿಯ ಮೇಲೆ ನೆಲೆಗೊಂಡಿದ್ದು, ಪುನಾಕಾ ಕೋಟೆ ಹಾಗೂ ಫೋ ಚು ಕಣಿವೆಯ ಚದುರಿದ ಹಳ್ಳಿಗಳ ನಡುವಿನ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ. ಎತ್ತರದ ಹಿಮಾಲಯದ ಬೆಟ್ಟಗಳು ಮತ್ತು ಹಚ್ಚ ಹಸುರಿನ ಭತ್ತದ ಗದ್ದೆಗಳ ಹಿನ್ನೆಲೆಯಲ್ಲಿ ನೆಲೆಗೊಂಡಿರುವ ಈ ಸೇತುವೆಯನ್ನು ನೋಡಿದಾಗ ಇದು ಕೇವಲ ಸಂಪರ್ಕ ಸಾಧನ ಮಾತ್ರವಲ್ಲ, ನಯನ ಮನೋಹರ ವಿಸ್ಮಯ ತಾಣ ಎಂದು ಅನಿಸದೇ ಇರಲು ಸಾಧ್ಯವೇ ಇಲ್ಲ.

ಈ ತೂಗುಸೇತುವೆ ಮೇಲೆ ನಿಂತು ನೋಡಿದರೆ, ಸುತ್ತಮುತ್ತಲಿನ ಹಸುರು ಬೆಟ್ಟಗಳ ಸಾಲು, ಆ ಬೆಟ್ಟಗಳನ್ನು ತಬ್ಬಲು ಪೈಪೋಟಿಗೆ ಬಿದ್ದಂತೆ ಮುಗಿಬೀಳುವ ಮೋಡಗಳು, ತಿಳಿ ಆಕಾಶದ ಸೊಬಗು ಕಣ್ಣಿಗೆ ಹಬ್ಬವನ್ನುಂಟುಮಾಡಿದವು. ಸೇತುವೆಯ ಉದ್ದಕ್ಕೂ ಹಾರಾಡುವ ಪ್ರಾರ್ಥನಾ ಧ್ವಜಗಳು ಸೇತುವೆಗೆ ಕಳೆ ತಂದಿದ್ದವು. ಸೇತುವೆ ಮೇಲೆ ಸಾಗುತ್ತಿದ್ದರೆ, ಕೆಳಗೆ ಹರಿಯುತ್ತಿದ್ದ ನದಿಯ ಜುಳುಜುಳು ನಾದ ಹಿಮ್ಮೇಳದಂತೆ ಮನಸ್ಸಿಗೆ ಮುಟ್ಟುತ್ತಿತ್ತು.

ಫೋ ಚು ತೂಗುಸೇತುವೆಯ ನಿರ್ಮಾಣದ ಹಿಂದಿನ ವ್ಯಕ್ತಿ ಥಾಂಗ್ಟಾಂಗ್ ಗ್ಯಾಲ್ಪೊ. ಅಧ್ಯಾತ್ಮ ಮತ್ತು ಎಂಜಿನಿಯರಿಂಗ್ ಜ್ಞಾನ ಮಿಳಿತವಾದ ಸಂತರಾಗಿದ್ದ ಅವರನ್ನು ‘ಕಬ್ಬಿಣದ ಸೇತುವೆ ನಿರ್ಮಾಣಕಾರ’ ಎಂದೇ ಕರೆಯಲಾಗುತ್ತದೆ. ಎಂಜಿನಿಯರ್ ಮತ್ತು ವೈದ್ಯರಾಗಿದ್ದ ಅವರು ಪ್ರಯಾಣ ಮತ್ತು ತೀರ್ಥಯಾತ್ರೆ ಮಾಡುವ ಹವ್ಯಾಸ ಹೊಂದಿದ್ದರು. ಹೀಗೆ ಪ್ರವಾಸ ಮಾಡುವಾಗ ಮಾರ್ಗಗಳನ್ನು ಸುಧಾರಿಸಲು ಭೂತಾನ್ ಮತ್ತು ಟಿಬೆಟ್‌ನಾದ್ಯಂತ ಹಲವಾರು ಕಬ್ಬಿಣದ ತೂಗುಸೇತುವೆಗಳನ್ನು ನಿರ್ಮಿಸಿದರು. ಲೋಹಶಾಸ್ತ್ರ ಮತ್ತು ಎಂಜಿನಿಯರಿಂಗ್‌ನಲ್ಲಿ ಅವರ ಪರಿಣತಿಯು ಭೂತಾನ್‌ನ ಆರಂಭಿಕ ತೂಗುಸೇತುವೆಗಳಿಗೆ ಅಡಿಪಾಯ ಹಾಕಿತು. ಅವುಗಳಲ್ಲಿ ಕೆಲವು ಇಂದಿಗೂ ಉಳಿದುಕೊಂಡಿವೆ.

ಫೋ ಚು ತೂಗುಸೇತುವೆಯನ್ನು 1637ರಲ್ಲಿ ಝಬ್ಡ್ರುಂಗ್ ನ್ಗಾವಾಂಗ್ ನಮ್ಗ್ಯಾಲ್ ಆಳ್ವಿಕೆಯಲ್ಲಿ ನಿರ್ಮಿಸಲಾಗಿದ್ದರೂ, ಇದು ಥಾಂಗ್ಟಾಂಗ್ ಗ್ಯಾಲ್ಪೊ ವಾಸ್ತುಶಿಲ್ಪದ ತತ್ವಗಳಿಂದ ಹೆಚ್ಚು ಪ್ರೇರಿತವಾಗಿದೆ.

ಫೋ ಚು ತೂಗುಸೇತುವೆಯನ್ನು ಕಠಿಣ ಹವಾಮಾನಮತ್ತು ನದಿಯಪ್ರಬಲಪ್ರವಾಹಗಳನ್ನು ತಡೆದುಕೊಳ್ಳುವಂತೆ ವಿನ್ಯಾಸಗೊಳಿಸಲಾಗಿದೆ. ಈ ಸೇತುವೆಯನ್ನು ಶತಮಾನಗಳಿಂದ ಮರ, ಕಲ್ಲು ಮತ್ತು ಉಕ್ಕಿನ ಕೇಬಲ್‌ಗಳ ಸಂಯೋಜನೆಯನ್ನು ಬಳಸಿಕೊಂಡು ಬಲಪಡಿಸಲಾಗಿದೆ. ಬಹು ಬಾರಿ ಪುನರ್ನಿರ್ಮಾಣಗಳ ಹೊರತಾಗಿಯೂ ಇದು ತನ್ನ ಐತಿಹಾಸಿಕ ಮಹತ್ವವನ್ನು ಉಳಿಸಿಕೊಂಡು ಭೂತಾನಿನ ಪರಂಪರೆಗೂ ಸಾಕ್ಷಿಯಾಗಿ ನಿಂತಿದೆ.

ನಾವು ಈ ತೂಗುಸೇತುವೆ ಮೇಲೆ ನಡೆಯುವಾಗ ರೋಮಾಂಚಕ ಅನುಭವವಾಯಿತು. ಸೇತುವೆಯ ಸೌಮ್ಯವಾದ ತೂಗಾಟವು ಭಯಮಿಶ್ರಿತ ಆನಂದ ಉಂಟುಮಾಡಿತ್ತು. ಭೂತಾನ್‌ಗೆ ಭೇಟಿ ನೀಡುವ ಯಾರಾದರೂ ಈ ತೂಗುಸೇತುವೆಯನ್ನು ನೋಡಲೇಬೇಕು, ಅದರ ಅನುಭವವನ್ನು ಪಡೆಯಲೇಬೇಕು. ಅದ್ಭುತ ಸೌಂದರ್ಯ ಸವಿಯುತ್ತಾ ಸ್ಥಳೀಯ ಸಂಸ್ಕೃತಿ ಮತ್ತು ಜೀವನ ವಿಧಾನವನ್ನು ಅನುಭವಿಸಲು ಭೂತಾನ್ ಒಂದು ಉತ್ತಮ ತಾಣವಂತೂ ಹೌದು. ■